ಪಿ.ಡಬ್ಲ್ಯೂ- 1

**ದಿನಾಂಕ 17-01-2024 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ : ಶ್ರೀ.ಎಸ್.ಪಿ.ಎಮ್ ವಕೀಲರಿಂದ ವಾದಿ ಪರವಾಗಿ**

ನಾನು ಈಗ ಮುಟೇಶನ ಎಂಟ್ರಿ ಸಂಖ್ಯೆ 119 ಹಾಗೂ 1915 ಗಳ ದೃಢೀಕೃತ ನಕಲುಗಳನ್ನು ಹಾಜರಪಡಿಸಿದ್ದು, ಸದರಿ ದಾಖಲಾತಿಗಳನ್ನು ನಿಪಿ-5 ಮತ್ತು ನಿಪಿ-6 ಎಂದು ಗುರುತಿಸಲಾಯಿತು. (ನಿಪಿ-5 ಮತ್ತು ನಿಪಿ-6 ದಾಖಲಾತಿಗಳ ಬೆರಳಚ್ಚು ಪ್ರತಿಗಳನ್ನು ಹಾಜರುಪಡಿಸುವ ಷರತ್ತಿಗೆ ಒಳಪಟ್ಟು ನಿಶಾನೆ ಎಂದು ಗುರುತಿಸಲಾಯಿತು). ಸರ್ವೆ ನಂ.45 ರ 1963-64 ರಿಂದ 1967-68, 1981-82 ರಿಂದ 1983-84, 1988-89 ರಿಂದ 1999-2000 ರವರೆಗಿನ ಪಹಣಿ ಪತ್ರಿಕೆ ಹಾಜರಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-7 ರಿಂದ ನಿಪಿ-9 ಎಂದು ಗುರುತಿಸಲಾಯಿತು. ಸರ್ವೆ ನಂ.23/1 ರ 1963-64 ರಿಂದ 1969-70, 1988-89 ರಿಂದ 1990-91, 1997-98 ರಿಂದ 1999-2000 ರವರೆಗಿನ ಪಹಣಿ ಪತ್ರಿಕೆಗಳನ್ನು ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-10 ರಿಂದ ನಿಪಿ-12 ಎಂದು, ಸರ್ವೆ ನಂ.45/1 ರ 2018-19 ರ ಪಹಣಿ ಪತ್ರಿಕೆ ಹಾಜರಪಡಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು. ಆದ್ದರಿಂದ ದಾವೆಯಲ್ಲಿ ಕೋರಿದಂತೆ ಮಂಜೂರು ಮಾಡಬೇಕಾಗಿ ವಿನಂತಿ.

**ಪಾಟೀ ಸವಾಲು : ಶ್ರೀ.ಎಸ್.ಐ.ಪಿ ವಕೀಲರಿಂದ ಪ್ರತಿವಾದಿ-2 ಪರವಾಗಿ**

ಪಾಟೀ ಸವಾಲು ಮಾಡಲು ಸಮಯವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

Sd/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ